**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಯಾವುದೇ ವ್ಯಕ್ತಿಯೊಂದಿಗೆ ನಮ್ಮ ಮೊದಲ ಭೇಟಿಯಾಗಿದ್ದರೆ ಅದು ಲವಲವಿಕೆಯಿಂದ ಕೂಡಿರಬೇಕು. ನಮ್ಮನ್ನು ಭೇಟಿ ಮಾಡುವ ವ್ಯಕ್ತಿಗೆ ಈ ಮೊದಲ ಭೇಟಿಯಲ್ಲಿಯೇ ನಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿದ್ದಾದರೆ ಮತ್ತೆ ಎಂದೆಂದಿಗೂ ಆತನಿಗೆ ನಮ್ಮ ಮೇಲೆ ಒಳ್ಳೆಯ ಅಭಿಪ್ರಾಯವೇ ಇರುತದೆ.

ನೆಂಟಸಿಕೆ ವಿಚಾರದಲ್ಲಿ ಬೇರೆಯವರನ್ನು ಭೇಟಿಯಾಗುವುದು, ಸಂದರ್ಶನ ಎದುರಿಸಲು ಮುಂದೆ ಕುಳಿತ ಮಹನಿಯರನ್ನು ಭೇಟಿಮಾಡುವುದು, ಉದ್ಯೋಗ ಕ್ಷೇತ್ರದಲ್ಲಿ ಹೊಸ ಹೊಸ ವ್ಯಕ್ತಿಗಳನ್ನು ಭೇಟಿಯಾಗುವುದು, ಸಂಘ ಸಂಸ್ಥೆಗಳಲ್ಲಿ ಹೊಸಸದಸ್ಯರಾಗಿ ಸೇರ್ಪಡೆಗೊಂಡಿರುವುದು. ಬೇರೆಬೇರೆ ಕೆಲಸಗಳಲ್ಲಿ ಬೇರೆಬೇರೆ ವ್ಯಕ್ತಿಗಳೊಂದಿಗೆ ಸಂಪರ್ಕ ಸಾಧಿಸುವುದು. ವ್ಯಾಪಾರದ ಏಜಂಟನಾಗಿ ಬೇರೆಬೇರೆ ವ್ಯಕ್ತಿಗಳೊಂದಿಗೆ ವ್ಯವಹಾರ ಕುದುರಿಸುವುದು ಮೊದಲಾದ ಸಂದರ್ಭಗಳಲ್ಲೆಲ್ಲಾ ಪ್ರಥಮ ಭೇಟಿಯು ಅನಿವಾರ್ಯವಾಗಿ ಇದಿರಾಗುತದೆ. ಅಂತಹ ಸಂದರ್ಭಗಳಲ್ಲಿ ನಾವು ನಮ್ಮ ಸದ್ವರ್ತನೆಯ ಮೂಲಕ ಭೇಟಿಯಾದ ವ್ಯಕಿಯೊಂದಿಗೆ ವ್ಯವಹಾರ ಕುದುರಿಸಲು ಸಾಧ್ಯವಾಗುತದೆ. ಮೊದಲ ಭೇಟಿಯ ಸಂದರ್ಭದಲ್ಲಿ ಅವನಿಗೆ ನಮ್ಮ ಮೇಲೆ ಸದಭಿಪ್ರಾಯ ಬರುವಂತೆ ನಮ್ಮ ವರ್ತನೆ ಇರಬೇಕು. ಈ ಕೆಲಸದಲ್ಲಿ ನಾವು ವಿಫಲರಾದರೆ ಮತ್ತೆ ನಮ್ಮ ಮೇಲೆ ಉತ್ತಮ ಅಭಿಪ್ರಾಯ ಬರುವಂತೆ ಮಾಡಲು ನಾವು ಬಹಳಷ್ಟು ಶ್ರಮ ಪಡಬೇಕು.

ಇಂತಹ ಸಂದರ್ಭದಲ್ಲಿ ಅವನ ವ್ಯಕಿಗತ ವರ್ತನೆ, ತಾಳ್ಮೆ ಹಾಗೂ ಆಡುವ ಭಾಷೆ ಹೆಚ್ಚು ಪ್ರಾಬಲ್ಯವನ್ನು ಉಂಟುಮಾಡುತ್ತದೆ.

ವ್ಯಕಿಗತ ವರ್ತನೆ ಎಂದರೆ ಬೇರೆ ಬೇರೆ ವ್ಯಕ್ತಿಗಳ ಗುಣಸ್ವಭಾವ ಬೇರೆ ಬೇರೆಯಾಗಿರುತ್ತದೆ. ಆದ್ದರಿಂದ ಅವರೆಲ್ಲರಲ್ಲಿಯೂ ಏಕರೀತಿಯಲ್ಲಿ ನಾವು ಸಂದರ್ಶಿಸಿ, ಮಾತನಾಡಿಸಿ ನಮ್ಮ ಕೆಲಸಮಾಡಿಸಿಕೊಳ್ಳಲು ಸಾಧ್ಯವಿಲ್ಲ. ಆ ಬಗ್ಗೆ ಸಂದರ್ಶಿಸುವವರಿಗೆ ತಿಳುವಳಿಕೆ ಅಗತ್ಯ.

ಇನ್ನು, ಎದುರಿರುವಾತ ವ್ಯಗ್ರವರ್ತನೆ ತೋರಿದಾಗ ತಾಳ್ಮೆಯ ಭಾವ ತೋರುವುದು ಲೇಸು. ನಮ್ಮ ತಾಳ್ಮೆಯೇ ಆತನ ಮೌಢ್ಯತೆಯನ್ನು ಎತ್ತಿ ತೋರಿಸಿಕೊಡುವುದು.

ಆಡುವ ಭಾಷೆಯಲ್ಲಿ ಸೌಜನ್ಯತೆ ಮತ್ತು ಸರಳತೆ ಇದ್ದಷ್ಟು ವ್ಯಕ್ತಿ ಸಂಭಾವಿತ ನೆನಿಸಿಕೊಳ್ಳುತ್ತಾನೆ.

ಈ ಎಲ್ಲಾ ಗುಣಗಳನ್ನು ನಮ್ಮಲ್ಲಿ ಬೆಳೆಸಿಕೊಂಡಷ್ಟು ನಾವು ಒಳ್ಳೆಯ ವ್ಯಕಿಗಳಾಗಲು ಸಾಧ್ಯ. ಆದ್ದರಿಂದ 'ಫಸ್ಟ್ ಇಂಪ್ರೆಶನ್ ಈಸ್ ಬೆಸ್ಟ್ ಇಂಪ್ರೆಶನ್' ಎಂಬ ಮಾತನ್ನು ಸದಾ ನೆನಪಿನಲ್ಲಿಟ್ಟುಕೊಳ್ಳೋಣ.

# ವೇದವೇದಾಂಗಗಳೆಂದರೇನು?

-ಆತ್ಮಾರಾಮ ಶಾಸ್ತ್ರೀ, ಬೆಂಗಳೂರು

(ಹಿಂದಿನ ಸಂಚಿಕೆಯಿಂದ....)

ಕೃಷ್ಣಯಜುರ್ವೇದಕ್ಕೆ ಕಠೋಪನಿಷತ್ತು ಮತ್ತು ಶ್ವೇತಾಶ್ವರೋಪನಿಷತ್ತುಗಳಿವೆ. ಶುಕ್ಲಯಜುರ್ವೇದಕ್ಕೆ ಈಶಾವಾಸ್ಯೋಪನಿಷತ್ತು, ಬೃಹದಾರಣ್ಯ ಕೋಪನಿಷತ್ತುಗಳಿವೆ. ವಸ್ತುತಃ ಶುಕ್ಲಯಜುರ್ವೇದಕ್ಕೆ ಆರಣ್ಯಕವೇ ಇಲ್ಲ. ಆದುದರಿಂದ ಬೃಹದಾರಣ್ಯಕೋಪನಿಷತ್ತನ್ನೇ ಆರಣ್ಯಕವೆಂದು ತಿಳಿಯುತ್ತಾರೆ.

**ಸಾಮವೇದ**

ಸಾ+ ಅಮ = ಸಾಮ. ಸಾ ಎಂದರೆ ಋಕ್ಕುಗಳೆಂದೂ, ಅಮ ಎಂದರೆ ಹಾಡುವ ರಾಗಗಳೆಂದೂ ಅರ್ಥ. ಅರ್ಥಾತ್ ವಿವಿಧ ರಾಗಗಳಿಂದ ಹಾಡಲ್ಪಡುವ ಋಕ್ಕುಗಳೇ ಸಾಮವೆಂದಾಗುತ್ತದೆ.

ಯಾಗಗಳಲ್ಲಿ ಉದ್ಗಾತೃವೆಂಬ ಋತ್ವಿಜನಿರುತ್ತಾನೆ. ಅವನಿಗೆ ಮಂತ್ರಗಳನ್ನು ಹಾಡುವುದೇ ಕೆಲಸ. ಈ ಉದ್ಗಾತೃವಿನ ಉಪಯೋಗಕ್ಕಾಗಿರುವ ವೇದ ಸಾಮ. ವಿವಿಧ ದೇವತೆಗಳ ಸ್ತುತಿಗಳನ್ನು ಹಾಡುತ್ತಾ ಹೇಳುವುದೇ ಸಾಮವೆನಿಸುತ್ತದೆ. ಯಾವ ಯಾವ ಋಕ್ಕುಗಳಿಂದ ದೇವತೆಗಳನ್ನು ರಾಗವಾಗಿ ಸ್ತುತಿಸುತ್ತಾರೋ ಆ ಋಕ್ಕುಗಳ ಸಂಕಲನವೇ ಸಾಮವೇದ.

ವಿವಾಹದ ಪರಿಣಯ ಕಾಲದಲ್ಲಿ ಹೇಳುವ ಒಂದು ಮಂತ್ರವಿದೆ – ಅಮೋಹಮಸ್ಮಿ ಸಾ ತ್ವಮ್, ಸಾ ತ್ವಮಸ್ಯಮೋಹಮ್ – ಎಂದು. (ಅಹಮ್ ಅಮಃ, ಅಸ್ಮಿ, ತ್ವಂ ಸಾ, ತ್ವಂ ಸಾ ಅಸಿ, ಅಹಮ್ ಅಮಃ) ನಾನು ಅಮ ಆಗಿದ್ದೇನೆ, ನೀನು ಸಾ, ನೀನು ಸಾ ಆಗಿದ್ದೀ, ನಾನು ಅಮ ಎಂದರ್ಥ. ಹೇಗೆ ಸಾ ಮತ್ತು ಅಮಗಳು ಸೇರಿ ಸಾಮಗಾನವಾಗುತ್ತದೋ ಹಾಗೆ ನಾವು ವಿವಾಹವಾಗಿ ದಂಪತಿಗಳಾಗೋಣ. ಎಂದರೆ ವಧೂ–ವರರ ಜೀವನವು ಸುಖ–ಸಂಗೀತವಾಗಲೆಂದು ಧ್ವನಿತಾರ್ಥ.

ವೇದಗಳಲ್ಲಿ ಸಾಮವೇದವೇ ಶ್ರೇಷ್ಠ. ಅದನ್ನೇ ಭಗವದ್ಗೀತೆಯಲ್ಲಿ ಭಗವಂತ ಹೇಳಿದ್ದು – ವೇದಗಳಲ್ಲಿ ನಾನು ಸಾಮವೇದವಾಗಿದ್ದೇನೆ – ಎಂದು.

ವೇದವ್ಯಾಸರು ಸಾಮವೇದವನ್ನು ಜೈಮಿನಿ ಮುನಿಗಳಿಗೆ ಉಪದೇಶಿಸಿದರಷ್ಟೆ? ಜೈಮಿನಿಗಳು ತಮ್ಮ ಪುತ್ರನಾದ ಸುಮಂತುವಿಗೆ ಒಂದು ಸಂಹಿತೆಯನ್ನೂ, ಪೌತ್ರನಾದ ಸುನ್ವಂತರಿಗೆ ಒಂದು ಸಂಹಿತೆಯನ್ನೂ ಹೇಳಿಕೊಟ್ಟರು. ಜೈಮಿನಿಗಳ ಶಿಷ್ಯಶ್ರೇಷ್ಠನಾದ ಸುಕರ್ಮನು ಸಾಮವೇದಕ್ಕೆ ಸಾವಿರ ಶಾಖೆಗಳನ್ನು ರಚಿಸಿದರು. ಸುಕರ್ಮನ ಶಿಷ್ಯರಾದ ಹಿರಣ್ಯನಾಭ, ಪೌಷ್ಯಂಜಿ, ಆವಂತ್ಯರು ಆ ಶಾಖೆಗಳನ್ನು ಗ್ರಹಣ ಮಾಡಿದರು. ಪೌಷ್ಯಂಜಿ ಮತ್ತು ಆವಂತ್ಯರಿಗೆ ಐನೂರು ಮಂದಿ ಶಿಷ್ಯರಿದ್ದರು. ಅವರು ಉತ್ತರಭಾರತದವರಾದುದರಿಂದ ಔದೀಚ್ಯಸಾಮವೇದಿಗಳೆನಿಸಿದರು. ಅವರು ಒಂದೊಂದು ಶಾಖೆಯನ್ನು ಅಧ್ಯಯನ ಮಾಡಿದರು. ಪೌಷ್ಯಂಜಿಯ ಶಿಷ್ಯರಾದ ಚೌಗಾಕ್ಷಿ, ಮಾಂಗಲಿ, ಕುಲ್ಯ, ಕುಸೀದ, ಕುಕ್ಷಿ ಎಂಬವರು ಪ್ರತ್ಯೇಕ ನೂರುನೂರು ಶಾಖೆಗಳನ್ನು ಅಧ್ಯಯನ ಮಾಡಿದರು. ( ಭಾಗವತ, ಸ್ಕಂಧ 12, ಅಧ್ಯಾಯ 6)

ಸಾಮವೇದಕ್ಕೆ ಸಾವಿರ ಶಾಖೆಗಳಿದ್ದರೂ ಅವುಗಳಲ್ಲಿ 13 ಶಾಖೆಗಳ ಹೆಸರುಗಳು ದೊರೆಯುತ್ತವೆ. ಅದರೆ ಇಂದು ಉಪಲಬ್ಧವಿರುವ ಶಾಖೆಗಳು ಮೂರು ಮಾತ್ರ. ಅವುಗಳು ರಾಣಾಯನೀಯ, ಕೌಥುಮ, ಜೈಮಿನೀಯ. ಇವುಗಳಲ್ಲಿ ಕೌಥುಮ ಶಾಖೆ ಹೆಚ್ಚು ಪ್ರಸಿದ್ಧ. ತಾಂಡ್ಯ ಎಂಬೊಂದು ಶಾಖೆ ಇದಕ್ಕೇ ಸೇರಿದ್ದೆನ್ನುತ್ತಾರೆ. ತಾಂಡ್ಯ ಬ್ರಾಹ್ಮಣ ಮತ್ತು ಉಪನಿಷತ್ತು ಇದಕ್ಕೇ ಸೇರಿದ್ದು.

ರಾಣಾಯನೀಯ ಶಾಖೆ ಕೌಥುಮಕ್ಕಿಂತ ತೀರ ಭಿನ್ನವಲ್ಲ. ಉಚ್ಚಾರಣೆಯಲ್ಲಿ ಮಾತ್ರ ತುಸು ಭೇದವಿದೆ. ಜೈಮಿನೀಯ ಶಾಖೆಯ ಸಂಹಿತೆಯಲ್ಲಿ ಮಂತ್ರಗಳು ಕಮ್ಮಿ ಇವೆ. ಅದರೆ ಸಾಮಗಾನಗಳು ಕೌಥುಮಕ್ಕಿಂತ ಹೆಚ್ಚಾಗಿವೆ. ಜೈಮಿನಿಯ ಶಾಖೆಯ ಉಪಶಾಖೆಯಾಗಿ ತಲವಕಾರ ಶಾಖೆಯೂ ಇದೆ.

ಸಾಮವೇದದಲ್ಲಿ 2 ಭಾಗಗಳಿವೆ. ಇವುಗಳಿಗೆ ಪೂರ್ವಾರ್ಚಿಕಾ ಮತ್ತು ಉತ್ತರಾರ್ಚಿಕಾ ಎಂದು ಹೆಸರು. ಪೂರ್ವಾರ್ಚಿಕೆಯಲ್ಲಿ ಆರು ಪ್ರಪಾಠಕಗಳೂ, ಉತ್ತರಾರ್ಚಿಕೆಯಲ್ಲಿ ಒಂಬತ್ತು ಪ್ರಪಾಠಕಗಳೂ ಇವೆ. ಸಾಮವೇದದಲ್ಲಿ ಒಟ್ಟು 1875 ಮಂತ್ರಗಳಿವೆ.

ಸಾಮವೇದವೇ ಭಾರತೀಯ ಸಂಗೀತಕ್ಕೆ ಮೂಲ. ಸಾಮಗಾನದಲ್ಲಿ 6 ವಿಕಾರಗಳಿವೆ. ಅವುಗಳೆಂದರೆ – 1. ವಿಕಾರ 2. ವಿಶ್ಲೇಷಣ 3. ವಿಕರ್ಷಣ 4. ಅಭ್ಯಾಸ 5. ವಿರಾಮ 6. ಸೋಭ. ಸಾಮಗಾನದ ಕ್ರಮ ಬಹಳ ಕಠಿನವಾದದ್ದು. ಆದುದರಿಂದಲೇ ಸಾಮವೇದಪಂಡಿತರು ಬೆರಳೆಣಿಕೆಯಷ್ಟಿರುವುದು.


ಸಾಮವೇದಕ್ಕೆ ತಾಂಡ್ಯ, ಷಡ್ವಿಂಶ, ಸಾಮವಿಧಾನ, ಆರ್ಷೇಯ, ದೈವತ, ಉಪನಿಷತ್, ಸಂಹಿತೋಪನಿಷತ್, ವಂಶ, ಜೈಮಿನೀಯ ಎಂಬ ಬ್ರಾಹ್ಮಣಗಳಿವೆ. ಹಾಗೇ ತಲವಕಾರ ಆರಣ್ಯಕವೂ ಸಾಮವೇದದ್ದೇ. ಸಾಮವೇದದ ಉಪನಿಷತ್ತುಗಳು ಎಂದರೆ ಛಾಂದೋಗ್ಯೋಪನಿಷತ್ ಮತ್ತು ಬೃಹದಾರಣ್ಯಕೋಪನಿಷತ್, ಜಾಬಾಲ್ಯುಪನಿಷತ್ತೂ ಸಾಮವೇದಕ್ಕೆ ಸೇರಿದ್ದು. ಮುಕ್ತಿಕೋಪನಿಷತ್ತಿನ ಪ್ರಕಾರ ಸಾಮವೇದಕ್ಕೆ 16 ಉಪನಿಷತ್ತುಗಳಿವೆ.

**ಅಥರ್ವವೇದ**

ಸೃಷ್ಟಿಗೆ ಮೊದಲು ಬ್ರಹ್ಮನು ತಪಸ್ಸನ್ನಾಚರಿಸಿದನು. ಆಗ ಅವನ ಮೈಯಿಂದ ಬೆವರು ಹರಿಯಿತು. ಆ ಬೆವರಿನಿಂದ ಭೃಗು ಮತ್ತು ಅಂಗಿರಸರು ಹುಟ್ಟಿದರು. ಭೃಗುವಿಗೆ ಇನ್ನೊಂದು ಹೆಸರು ಅಥರ್ವ ಎಂದು. ಅಥರ್ವನಿಂದ ಅಥರ್ವಾಣರ ಮತ್ತು ಅಂಗಿರಸನಿಂದ ಆಂಗಿರಸರ ಉತ್ಪತ್ತಿಯಾಯಿತು. ಅಥರ್ವ ಮತ್ತು ಅಂಗಿರಸರಿಂದ

(4ನೇ ಪುಟಕ್ಕೆ....)

# ಈಶ್ವರಯ್ಯನವರಿಗೆ ಮೊದಲ "ವ್ಯಾಸ ಪ್ರಶಸ್ತಿ"



ಬಹುಮುಖ ಪ್ರತಿಭೆಯ ಶ್ರೀ ಈಶ್ವರಯ್ಯ ಇವರಿಗೆ ಕನ್ನಡದ ಶ್ರೇಷ್ಠ ಕಥೆಗಾರರಲ್ಲಿ ಒಬ್ಬರಾಗಿರುವ ದಿ. ಎಂ. ವ್ಯಾಸರ ನೆನಪಿನಲ್ಲಿ ಕೊಡಮಾಡುವ ಪ್ರಥಮ "**ವ್ಯಾಸ ಪ್ರಶಸ್ತಿ**" ಪ್ರದಾನ ಮಾಡಲಾಗಿದೆ. ಶ್ರೀ ಈಶ್ವರಯ್ಯ ಒಬ್ಬ ಪತ್ರಿಕೋದ್ಯಮಿಯಾಗಿ, ಕಲಾವಿಮರ್ಶಕನಾಗಿ, ಒಬ್ಬ ಛಾಯಾಗ್ರಹಣ ಶಾಸ್ತ್ರಜ್ಞನಾಗಿ, ಸಾಹಿತಿಯಾಗಿ, ಸಂಗೀತ ಕ್ಷೇತ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮತ್ತು ವಾಗ್ಮಿಯಾಗಿ ಗುರುತಿಸಲ್ಪಟ್ಟವರು. ಉದಯವಾಣಿ, ತುಷಾರ ಪತ್ರಿಕೆಗಳ ಸಂಪಾದಕರಾಗಿದ್ದ ಈಶ್ವರಯ್ಯನವರಿಗೆ ಕರ್ನಾಟಕ ಪತ್ರಿಕಾ ಅಕಾಡೆಮಿ ಪುರಸ್ಕಾರ, ಸಂದೇಶ ಪ್ರಶಸ್ತಿ, ಕಲಾ ವಿಮರ್ಶಕ ಪ್ರಶಸ್ತಿ, ಪರಶುರಾಮ ಪ್ರಶಸ್ತಿ ಲಭಿಸಿವೆ. ಮುಂಬೈಯಲ್ಲಿ ಯಕ್ಷಗಾನ ಸಮ್ಮೇಳನದ ಅಧ್ಯಕ್ಷತೆ, ಕಾಸರಗೋಡಿನ ಸಂಗೀತ ಸಮ್ಮೇಳನದ ಅಧ್ಯಕ್ಷತೆ, ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನಡೆದ ಪ್ರಥಮ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಗಳು ಲಭಿಸಿವೆ.

ಶ್ರೀ ಎ. ಈಶ್ವರಯ್ಯನವರಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

## ಹೊಸ ಬೆಳಕು

**ನಲ್ನುಡಿ :**

**ಸಾಹಿತ್ಯ ಸಂಗೀತ ಕಲಾವಿಹೀನಃ**
**ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ**
**ತೃಣಂ ನ ಖಾದನ್ನಪಿ ಜೀವಮಾನಃ**
**ತದ್ಭಾಗದೇಯಂ ಪರಮಂ ಪಶೂನಾಂ।**

ಅಂದರೆ ಸಾಹಿತ್ಯ, ಸಂಗೀತ, ಚಿತ್ರ, ನೃತ್ಯ, ಶಿಲ್ಪ ಇವೇ ಮೊದಲಾದ ವಿದ್ಯೆಗಳಲ್ಲಿ ಆಸಕ್ತಿಯಿಲ್ಲದವನು ನಿಜವಾಗಿಯೂ ದನವೇ ಸರಿ. ಆದರೆ ಇವನಿಗೆ ಕೊಂಬು ಬಾಲಗಳಿಲ್ಲ. ಹುಲ್ಲನ್ನೂ ತಿನ್ನದೆ ಇವನು ಇರಬಲ್ಲನೆಂಬ ಸಂಗತಿ ನಿಜವಾದ ದನಗಳ ಸೌಭಾಗ್ಯವೇ ಸರಿ.

**ಪುಸ್ತಕ ಪರಿಚಯ :**

**ಶಿವಗಂಗಾ– ವಾರ್ಷಿಕ ಸಂಚಿಕೆ–2008**
**ಪ್ರಕಾಶಕರು : ಶಿವಬ್ರಾಹ್ಮಣ ಸಭಾ (ರಿ.)**
**ಕಾಸರಗೋಡು**

ಶಿವಬ್ರಾಹ್ಮಣ ಸಭಾ (ರಿ.) ಕಾಸರಗೋಡು ವ್ಯವಸ್ಥಿತ ರೀತಿಯಲ್ಲಿ ಇಡೀ ಕಾಸರಗೋಡು ಜಿಲ್ಲೆಯ ಎಲ್ಲಾ ಭಾಗದ ಪ್ರತಿನಿಧಿಗಳನ್ನು ಒಳಗೊಂಡು ಕಾರ್ಯಪ್ರವೃತ್ತವಾಗಿ 13ನೇ ವರ್ಷ ಪೂರೈಸಿ 14ನೇ ವರ್ಷಕ್ಕೆ ಕಾಲಿರಿಸಿದೆ. ಈ ಸಂದರ್ಭದಲ್ಲಿ 'ಶಿವಗಂಗಾ' (ಖಾಸಗಿ ಪ್ರಸಾರಕ್ಕಾಗಿ) ವಾರ್ಷಿಕ ಸಂಚಿಕೆ – 2008ನ್ನು ಬಿಡುಗಡೆಗೊಳಿಸಿದೆ. ಸಭೆಯ ಇಡೀ ವರ್ಷದ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ಆದರೆ ಬಹಳ ಆಕರ್ಷಕವಾಗಿ ಈ ರೀತಿ ವಾರ್ಷಿಕ ಸಂಚಿಕೆಯ ರೂಪದಲ್ಲಿ ಹಲವು ವರ್ಷಗಳಿಂದ ಸಭೆಯು ಪ್ರಕಟಿಸಿರುವುದು ಒಂದು ಶ್ಲಾಘನೀಯ ಸಾಧನೆಯಾಗಿದೆ. ಹಿಂದಿನ ಹಲವು ವಾರ್ಷಿಕ ಸಂಚಿಕೆಗಳ ಪ್ರಧಾನ ಸಂಪಾದಕರಾಗಿದ್ದವರು ಪ್ರಸಿದ್ಧ ಸಾಹಿತಿ ಎಂ. ವ್ಯಾಸ. ಅವರ ಒಂದು ಸಂಪಾದಕೀಯದ ಕೆಲವು ಸಾಲುಗಳನ್ನು ನೆನಪಿಸಿಕೊಳ್ಳೋಣ. "ಅನಿವಾರ್ಯ ಮತ್ತು ತೀರಾ ಸಹಜವಾದ ವ್ಯಾಪಾರೀಕರಣ ಜಾಗತೀಕರಣಗಳ ಹುಚ್ಚುಹೊಳೆಯಲ್ಲಿ ಕೊಚ್ಚಿ ಹೋಗಲಿರುವ ಬಲಹೀನರನ್ನು ತಲೆ ಎತ್ತಿ ನಿಲ್ಲುವಂತೆ ಬಲಶಾಲಿಗಳು ಮಾಡಲೇಬೇಕಾಗಿರುವುದು ಇಂದಿನ ಅವಶ್ಯಕತೆಯಾಗಿದೆ. ದೇಶದ ಸಮಾಜದ ಮನೆಯ ಒಂಟಿಯಾಗುತ್ತಿರುವ ಮನುಷ್ಯನ ಅವಶ್ಯಕತೆಯಾಗಿದೆ. 'ಶಕ್ತಿ' ಕಳೆದುಕೊಂಡವನು 'ಗತಿ' ಕಳೆದುಕೊಳ್ಳುತ್ತಾನೆ. 'ನಡೆಯುನ್ನೂ ಸಮಾಜವೂ ಅಷ್ಟೇ ದೇಶವೂ ಅಷ್ಟೇ ಜಗತ್ತೂ ಅಷ್ಟೇ...... ಬಲಹೀನರನ್ನು ದೇವರು ಎತ್ತಿಕೊಳ್ಳುತ್ತಾನೆ ಎಂಬುದು ಎಲ್ಲಾ ಧರ್ಮದ ಅನುಯಾಯಿಗಳ ನಂಬಿಕೆ. ದೇವಭಾವದ ಈ ಕಾಯಕಕ್ಕೆ ನಮ್ಮದೂ ನಿಮ್ಮದೂ ಅಳಿಲಸೇವೆ ಇರಬೇಕು. ದಡಗಳ ಮಧ್ಯದ ಕಂದಕಗಳಿಗೆ ಸೇತುವೆಯಾಗುವುದೇ ಹಾಗೆ. ಹಂಚಲು ಏನೂ ಇಲ್ಲದವರಲ್ಲೂ ಹಂಚಲು ಪ್ರೀತಿ ಸ್ನೇಹ ಇದ್ದೇ ಇರುತ್ತದೆ. ಅದನ್ನೇ ಹಂಚೋಣ ಸ್ವೀಕರಿಸೋಣ......"

ಎಂ. ವ್ಯಾಸರ ನಿಧನದಿಂದಾಗಿ ಅವರ ಈ ಸಂಪಾದಕೀಯ ಕೆಲಸವನ್ನು ಈ ಸಂಚಿಕೆಯಲ್ಲಿ ಹಂಚಿಕೊಂಡವರು ಸುಕುಮಾರ ಆಲಂಪಾಡಿ. ಅವರು ಸಂಪಾದಕೀಯದಲ್ಲಿ ಬರೆಯುತಾರೆ, "ವ್ಯಾಸರು ವ್ಯಾಸರಾಗಿಯೇ ಹೊರಹೊಮ್ಮಿದರು. ಅವರದ್ದೆ ವ್ಯಾಸಪಥವಾಯಿತು. ಎಲ್ಲರೊಟ್ಟಿಗಿದ್ದು ಎಲ್ಲರಿಗಿಂತ ಭಿನ್ನವಾಗಿ ಯೋಚಿಸಿ ನಮ್ಮ ಯೋಚನೆಗಳಿಗೆ ಹೊಸ ಆಯಾಮವನ್ನು ನೀಡುವ ಅಪರೂಪದ ವಿಚಾರಧಾರೆ ಅವರದ್ದಾದರಿಂದಲೇ ಅವರು ನಮಗೆಲ್ಲಾ ಪ್ರಿಯವಾದರು, ಶಿವಗಂಗಾದ ಸಂಪಾದಕೀಯಗಳು ಸಾಂದ್ರವಾದ ಭಾವ ಬಿಂಬಗಳಾದವು, ಅಮೂಲ್ಯ ದಾಖಲೆಗಳಾದವು".

ಈ ಸಂಚಿಕೆಯ ಒಳಪುಟಗಳಲ್ಲಿ ಅಧ್ಯಕ್ಷರು ಎ.ವಿ. ಶ್ಯಾನುಭೋಗ್‌ರವರ ಮಾತು; ಡಾ। ವರದರಾಜ ಚಂದ್ರಗಿರಿಯವರ 'ಎಂ. ವ್ಯಾಸ – ಒಂದು ಆತ್ಮೀಯ ನೆನಪು'; ಕೃಪಾ ಕೆ.ಜಿ. ಯವರ 'ನನ್ನ ಅಣ್ಣ' (ವ್ಯಾಸರ ನೆನಪು); ಡಾ। ಸುಲೇಖಾ ವರದರಾಜ್‌ರವರ 'ಮಗುವಿಗೊಂದು ಪತ್ರ' ಮೊದಲಾದ ಬರಹಗಳಿವೆ. ಶ್ರೀ ಈಶ್ವರಯ್ಯ ಎ. ಅವರಿಗೆ ವ್ಯಾಸ ಪ್ರಶಸ್ತಿ, ಶ್ರೀಮತಿ ರಾಧಾಮುರಳೀಧರ ಹಾಗೂ ಕುಮಾರಿ ಶ್ರೇಯಸ್ವಿ ಸತ್ಯನಾಥ್ ಎಂ. ಇವರ ಬಗ್ಗೆ ಲೇಖನಗಳಿವೆ.

ಮುಖಪುಟ: ಗೌತಂ ಕೆ.ಜಿ. ಮುದ್ರಣ: ಸಿರಿಗನ್ನಡ ಕಾಸರಗೋಡು.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ.